# ಸ್ತಬ್ಧ ಕಾವ್ಯ

ಕಲ್ಲುಗಳ ಪೋಣಿಸಿದ ಕಲಾಕೃತಿಯಲಿ
ಕಿರು ಬೆರಳಿನ ಸಣ್ಣ ಚಿತ್ತಾರವಿದೆ.
ಮರಳು ಚೆಲ್ಲಾಡಿದ ಸಾಗರದ ಹೆಜ್ಜೆಗಳು
ಸವೆದು ಹೋಗುವ ಮುನ್ನ
ಅಲೆಗಳು ಮತ್ತೆ ಬರುತಿವೆ ಅಲೆಮಾರಿಯ
ಅಂಗವ ಧರಿಸಿಕೊಂಡು!

ಕಣ್ಣರಳಿಸಿ ನಿಂತ ಕಂದನ ಕೈಯೊಳಗೆ
ಕನಸಿನ ಕುಲಾಯಿ ಹೊಲಿಸಬೇಕಿದೆ!
ಕೂಗಳತೆಯಲಿ ಕೂತ ಕಲ್ಲಿನ ಗೋಪುರಕೆ
ಹೊದಿಸಬೇಕಿದೆ,
ಈ ಅಲೆಗಳ ಅರಚಾಟಕೆ ಬೆಚ್ಚನೆಯ
ಹೊದಿಕೆ ಬೇಕಿದೆ,
ಅದೋ ಅಮ್ಮನ ಅಂಗೈಯಲಿ ಬ್ರಹ್ಮಾಂಡ
ಬೇಯಿಸುವ ಕುಲುಮೆ ಇದೆ!

ಮುಗಿಲ ಮೂತಿಗೆ ಮುತ್ತಿಡುವ ಕಲ್ಲಿನ
ಕನ್ನಡಿಯಲಿ,
ಕಂದನ ಅಂಗೈಯ ದೃಷ್ಟಿ ಬೊಟ್ಟು
ಮುಗುಳು ನಗುತಿದೆ.
ಸಾಗರದ ನೀರೆಲ್ಲಾ ಪಾದಗಳ ಸೋಕುವಾಗ
ಹನಿ ಹನಿಯಲೂ ಹವಳದ ಗಿರಿ
ಜನ್ಮ ತಾಳುತಿದೆ !

ಕಡಲಿಗೂ ಮುಗಿಲಿಗೂ ಅಮ್ಮನ
ಅಂಗೈಯ ಗೆರೆಯೇ ಸೇತುವೆಯಂತೆ!
ನಡೆಯುವ ಕೂಸಿಗೂ ಕಣ್ಣಿನ ಕನಸಿಗೂ
ದಡದಲಿ ಕೂತ ಹೆಜ್ಜೆಯೇ ಮೈಲಿಗಲ್ಲಂತೆ!
ನಡೆ ನಡೆದು ನಡೆಯುವ ಈ ನಗುವಿಗೆ
ಮುತ್ತ ಹನಿಗಳ ತಾಕುವ ತವಕವಿದೆ.
ಪದಗಳೆಲ್ಲ ಚೆಲ್ಲಾಡಿದರೂ ಪೂರ್ತಿ ಆಗದ
ಸ್ತಬ್ಧ ಕಾವ್ಯವಿದೆ!

● ಚಾಂದ್ ಪಾಷ ಎನ್.ಎಸ್.



# ಕಲ್ಲು ಹೇಳಿದ ಕತೆ

ದೀಪವೊಂದು ಮಾತಾಡುತಿದೆ
ಅಮ್ಮನಿಟ್ಟ ಕಲ್ಲುಗಳ ಕತೆ ಹೇಳುತಿದೆ
ಅದೋ ಕಂದಾ,
ಸುಂದರ ಯುವರಾಜ
ಮಗನ ಮುಖವ ಮರೆತ
ಜಗದ ಜನರ ಮಕ್ಕಳೆಂದ
ಸತಿಯ ಕೈ ಮರೆತನೀತ
ಜಗಕೆ ಶಾಂತಿ ನೀಡ ಹೊರಟ

ಅತ್ತ ನೋಡು ಆಸೆಬುರುಕ
ಜಗವ ಗೆಲ್ಲುವೆನೆಂಬ ತಹತಹದಲಿ
ಅಲೆದ ಯುವಕ
ಗೆದ್ದೆ ಬಿಟ್ಟ ಒಂದು ದಿನ
ತನ್ನ ಮನವ ತನ್ನ ತನುವ

ಬಾರೊ ಕಂದ, ಬಾರೊ ಒಮ್ಮೆ
ಕತ್ತಿ ಹಿರಿದವರನ್ನು ಕಾಣು
ಹೆಣ್ಣು ಸೈ ಗಂಡು ಸೈ
ಕಚ್ಚೆ ಕಟ್ಟಿ ನಿಂತ ಕಲ್ಲ ಕಾಣು
ಕಲ್ಲ ಹಿಂದೆ ಕತೆಯ ಕಾಣು

ಇತ್ತ ಕಂದ, ಇತ್ತ ಬಾ
ಕಾಣು ಅಲ್ಲಿ ನೂರು ಮುಖ
ಸತ್ತವರೆಷ್ಟೊ ಚರಿತ್ರೆಯ ಕಂಡರೆಷ್ಟೊ
ಸಾಕು ಅಮ್ಮ!
ಕಲ್ಲುಗಳ ಕೂಡಿಟ್ಟು
ನಡೆ ಅಲ್ಲಿ ಮತ್ತಷ್ಟು ಕಲ್ಲುಗಳಿವೆ

ದೀಪವೊಂದು ಮಾತಾಡುತಿದೆ
ಅಮ್ಮನಿಟ್ಟ ಕಲ್ಲುಗಳ ಕತೆ ಹೇಳುತಿದೆ

● ಶ್ವೇತಾ ಎನ್.